ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 2, May-June 2024, Pp. 106-109
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕೋವಿಡ್ 19 ಸಮಯದ ಉದ್ಯೋಗ ಸೃಷ್ಟಿಯಲ್ಲಿ MGNREGA ಪಾತ್ರ : ಕೊಡಗು ಜಿಲ್ಲೆಯನ್ನು ಅನುಲಕ್ಷಿಸಿ

**ಪುಟ್ಟರಾಜು ಸಿ[1] ಮತ್ತು ಡಾ. ಎನ್. ಆನಂದಗೌಡ[2]**

[1]ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಗ್ಗಡದೇವನಕೋಟೆ, ಮೈಸೂರು.
[2]ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು

**Abstract:**

*ಕೋವಿಡ್ 19 ಸಾಂಕ್ರಮಿಕ ರೋಗದ ಸಂದರ್ಭದಲ್ಲಿ ಜಗತ್ತಿನ ಎಲ್ಲಾ ರಾಷ್ಟ್ರಗಳು ಸ್ತಬ್ಧವಾಗಿದ್ದವು. ಜೀವನ ನಿರ್ವಹಣೆ ಅತ್ಯಂತ ಕಠಿಣವಾಗಿತ್ತು. ಆ ಸಂದರ್ಭದಲ್ಲಿ ಭಾರತದ ಗ್ರಾಮೀಣ ಪ್ರದೇಶದಲ್ಲಿ ಆಸರೆಯಾದದ್ದು MGNREGA–ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಕಾಯಿದೆ. ಈ ಯೋಜನೆಯು ಗ್ರಾಮೀಣ ಭಾಗದಲ್ಲಿ ಉದ್ಯೋಗ ಸೃಷ್ಟಿಸಿ ಜೀವನೋಪಾಯಕ್ಕೆ ಅವಕಾಶ ಮಾಡಿಕೊಟ್ಟಿತು. ಈ ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಯಲ್ಲಿ MGNREGA ಕಾಯಿದೆ ಯಾವ ರೀತಿ ಪರಿಣಾಮ ಬೀರಿತು ಎಂಬುದನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಆನುಷಂಗಿಕ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ. ಈ ಕಾಯಿದೆ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗವನ್ನು ಸೃಷ್ಟಿಸುವುದರ ಜೊತೆಗೆ ಮೂಲ ಸೌಕರ್ಯ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿತು.*

**Keywords:** *ಕೋವಿಡ್–19, ಗ್ರಾಮೀಣ ಜೀವನೋಪಾಯ, MGNREGA, ಉದ್ಯೋಗ ಸೃಷ್ಟಿ, ಮೂಲಸೌಕರ್ಯ ಅಭಿವೃದ್ಧಿ.*

## ಪೀಠಿಕೆ

ಮೂಲಸೌಕರ್ಯ ಅಭಿವೃದ್ಧಿ ರಾಷ್ಟ್ರದ ಅಭಿವೃದ್ಧಿಯನ್ನು ಅಳೆಯುವ ಪ್ರಮುಖ ಸಾಧನವಾಗಿದೆ ಮತ್ತು ಹಳ್ಳಿಗಳ ಅಭಿವೃದ್ಧಿಯಿಂದ ದೇಶದ ಪ್ರಗತಿ ಸಾಧ್ಯ. ಭಾರತದಾದ್ಯಂತ ಮೂಲಸೌಕರ್ಯ ಅಭಿವೃದ್ಧಿಗಾಗಿ ಭಾರತ ಸರ್ಕಾರ ಕಳೆದ 70 ವರ್ಷದಿಂದ ಹಲವಾರು ಕಾರ್ಯಕ್ರಮಗಳನ್ನು ಪರಿಚಯಿಸುತ್ತಿದೆ. ಈ ಎಲ್ಲಾ ಕಾರ್ಯಕ್ರಮಗಳು ಅವುಗಳ ಅನುಷ್ಠಾನದ ಕ್ರಮವನ್ನು ನೋಡಿದಾಗ ಪರಿಣಾಮಕಾರಿಯಾಗಿ ಅನುಷ್ಠಾನವಾಗಿಲ್ಲ. ಪ್ರತಿಯೊಂದು ಕಾರ್ಯಕ್ರಮಗಳು ಸಾಮಾಜಿಕ ಬದಲಾವಣೆಯಲ್ಲಿ ಪ್ರಮುಖ ಬದಲಾವಣೆಗಳನ್ನು ಮಾಡಲು ವಿಫಲವಾಗಿವೆ. ಆದರೆ MGNREGA ತನ್ನ ಕೆಲಸಗಳ ಮೂಲಕ ಅಗತ್ಯವಿರುವವರಿಗೆ ಉದ್ಯೋಗಾವಕಾಶ ಹಾಗೂ ಸಾಮುದಾಯಿಕ ಆಸ್ತಿ ಸೃಷ್ಟಿಸುವಲ್ಲಿ ಯಶಸ್ವಿಯಾಗಿದೆ.

***Please cite this article as:*** ಪುಟ್ಟರಾಜು ಸಿ ಮತ್ತು ಎನ್. ಆನಂದಗೌಡ. (2024). ಕೋವಿಡ್ 19 ಸಮಯದ ಉದ್ಯೋಗ ಸೃಷ್ಟಿಯಲ್ಲಿ MGNREGA ಪಾತ್ರ: ಕೊಡಗು ಜಿಲ್ಲೆಯನ್ನು ಅನುಲಕ್ಷಿಸಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 3(2), 106–109

MGNREGA ಗ್ರಾಮೀಣ ಪ್ರದೇಶದ ಜನರಿಗೆ ಉದ್ಯೋಗ, ವೇತನ, ಮತ್ತು ಕನಿಷ್ಠ ಮಟ್ಟದ ಜೀವನೋಪಾಯ ಸುರಕ್ಷತೆಯನ್ನು ಖಾತರಿಪಡಿಸುವ ಕಾಯಿದೆಯಾಗಿದೆ. MGNREGA ಗ್ರಾಮೀಣ ಪ್ರದೇಶದ ಕುಟುಂಬವೊಂದಕ್ಕೆ ಆರ್ಥಿಕ ವರ್ಷದಲ್ಲಿ ನೂರು ದಿನಗಳ ಉದ್ಯೋಗವನ್ನು ಖಾತರಿಪಡಿಸುತ್ತದೆ. 18 ವರ್ಷ ತುಂಬಿದವರು ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸುವ ಮೂಲಕ ಉದ್ಯೋಗ ಪಡೆದುಕೊಳ್ಳಬಹುದಾಗಿದೆ. ಈ ಕಾಯಿದೆಯಡಿ ಹೆಣ್ಣು ಗಂಡು ಎಂಬ ಬೇಧವಿಲ್ಲದೆ ಸಮಾನ ವೇತನವನ್ನು ನೀಡಲಾಗುತ್ತದೆ. ಭೂ ಮತ್ತು ಜಲಸಂಪನ್ಮೂಲಗಳನ್ನು ಹೆಚ್ಚಿಸಲು, ಗ್ರಾಮೀಣ ಸಂಪರ್ಕವನ್ನು ಸುಧಾರಿಸಲು ಮತ್ತು ಗ್ರಾಮೀಣ ಬಡವರ ಜೀವನೋಪಾಯದ ಸಂಪನ್ಮೂಲವನ್ನು ಬಲಪಡಿಸಲು, ಬಾಳಿಕೆ ಬರುವ ಆಸ್ತಿಗಳನ್ನು ಸೃಷ್ಟಿಸಲು MGNREGA ಯೋಜನೆ ಉಪಯುಕ್ತವಾಗಿದೆ.

**ಅಧ್ಯಯನದ ಉದ್ದೇಶಗಳು**

- ಕೋವಿಡ್ ಸಂದರ್ಭದ ಜನ ಜೀವನದ ಮೇಲೆ MGNREGA ಕಾಯಿದೆಯ ಪಾತ್ರವನ್ನು ತಿಳಿದುಕೊಳ್ಳುವುದು.
- MGNREGA ಫಲಾನುಭವಿಗಳ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು.

**ಅಧ್ಯಯನ ವಿಧಾನ**

ಪ್ರಸ್ತುತ ಅಧ್ಯಯನವು ಆನುಷಂಗಿಕ ಮಾಹಿತಿ ಮೂಲವನ್ನು ಆಧಾರಿಸಿದೆ. ಈ ಮಾಹಿತಿಯನ್ನು ಪಾಕ್ಷಿಕಗಳು, ಪುಸ್ತಕಗಳು, ಪ್ರಬಂಧಗಳು, ವರದಿಗಳಿಂದ ಸಂಗ್ರಹಿಸಲಾಗಿದೆ.

**ಕೊಡಗು ಜಿಲ್ಲೆಯಲ್ಲಿ MGNREGA ಅನುಷ್ಠಾನ**

ಬಡತನದ ಮೇಲೆ ಉದ್ಯೋಗ ಮತ್ತು ಆದಾಯ ನೇರ ಪರಿಣಾಮ ಬೀರುವ ಅಂಶಗಳಾಗಿವೆ. ಮನುಷ್ಯ ಜೀವನ ನಡೆಸಲು ಸಮರ್ಪಕ ಉದ್ಯೋಗದ ಮೂಲಕ ಆದಾಯ ಗಳಿಸುವುದು ಅತ್ಯಗತ್ಯ. ಯೋಗ್ಯವಾದ ಜೀವನ ಮಟ್ಟವನ್ನು ಖಚಿತಪಡಿಸಿಕೊಳ್ಳಲು ಮತ್ತು ಆರ್ಥಿಕ ಬೆಳವಣಿಗೆಯನ್ನು ದಾಖಲಿಸಲು ಸಾಕಷ್ಟು ಆದಾಯವು ಅವಶ್ಯಕವಾಗಿದೆ. ಆದಾಯ ಮತ್ತು ಉದ್ಯೋಗದ ಲಭ್ಯತೆಯು ಹೆಚ್ಚಾಗಿ ಆರ್ಥಿಕತೆಯ ರಚನೆಯಿಂದ ಪ್ರಭಾವಿತವಾಗಿರುತ್ತದೆ. ಬೆಳೆಯುತ್ತಿರುವ ಕಾರ್ಮಿಕ ಬಲಕ್ಕೆ ವೈವಿಧ್ಯಮಯ ರಚನೆಯು ಪರ್ಯಾಯ ಉದ್ಯೋಗವನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ.

ದೇಶದ ಸಂಕೀರ್ಣ ಸಮಸ್ಯೆಯಾದ ಬಡತನವನ್ನು ನಿಭಾಯಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಯೋಜನೆಗಳನ್ನು ಜಾರಿಗೆ ತಂದಿವೆ. ಈ ಯೋಜನೆಗಳು ಬೆಳವಣಿಗೆಯನ್ನು ಉತ್ತೇಜಿಸುವ ಕಾರ್ಯಕ್ರಮಗಳು ಮತ್ತು ಬಡವರನ್ನು ತಲುಪಲು ನಿರ್ದಿಷ್ಟ ಉದ್ದೇಶಿತ ಉಪಕ್ರಮಗಳನ್ನು ಒಳಗೊಂಡಿವೆ. ಜಿಲ್ಲೆಯಲ್ಲಿ ಇಲ್ಲಿಯವರೆಗೆ ಸಕ್ರಿಯವಾಗಿರುವ ಮತ್ತು ಯಶಸ್ವಿಯಾಗಿ ಜಾರಿಗೆ ಬರುವ ನಿರ್ಣಾಯಕ ಕಾರ್ಯಕ್ರಮಗಳನ್ನು ಅಧ್ಯಯನ ಮಾಡುವುದು ಮುಖ್ಯ. ಈ ನಿಟ್ಟಿನಲ್ಲಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ ಬಹುಮುಖ್ಯ ಉಪಕ್ರಮವಾಗಿದೆ. ಜಿಲ್ಲೆಯಲ್ಲಿ MGNREGA ಗ್ರಾಮೀಣ ಜನರಿಗೆ 2.14 ಲಕ್ಷ ಮಾನವ ದಿನಗಳನ್ನು ಸೃಜಿಸುವಲ್ಲಿ ಯಶಸ್ವಿಯಾಗಿದೆ. ಇದರಲ್ಲಿ 1.44 ಲಕ್ಷ ಪುರುಷರು ಮತ್ತು 0.70 ಲಕ್ಷ ಮಹಿಳೆಯರು ಉದ್ಯೋಗಗಳನ್ನು ಪಡೆದಿದ್ದಾರೆ. ಒಟ್ಟು ಗ್ರಾಮೀಣ ಕುಟುಂಬಗಳಲ್ಲಿ ಶೇಕಡಾ 35.30 ಕುಟುಂಬಗಳಿಗೆ ಉದ್ಯೋಗ ಕಾರ್ಡ್‌ಗಳನ್ನು ನೀಡಲಾಗಿದೆ. ತಾಲೂಕುವಾರು ನೋಡಿದಾಗ ಉದ್ಯೋಗ ಕಾರ್ಡ್ ನೀಡಿರುವಲ್ಲಿ ಸೋಮವಾರಪೇಟೆ ಪ್ರಥಮ ಸ್ಥಾನದಲ್ಲಿದ್ದರೆ, ವಿರಾಜಪೇಟೆ ಮತ್ತು ಮಡಿಕೇರಿ ನಂತರದ

ಸ್ಥಾನದಲ್ಲಿವೆ. ಕೋವಿಡ್ ಸಂದರ್ಭದಲ್ಲಿ MGNREGA ಆಶಾಕಿರಣವಾಗಿತ್ತು.

**ಫಲಿತಗಳು ಮತ್ತು ಸಲಹೆಗಳು**

1. ಕೊಡಗು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಸಮುದಾಯಗಳು ಸಂಕಷ್ಟದ ಜೀವನ ನಡೆಸುತ್ತಿವೆ. ಈ ಹಿನ್ನೆಲೆಯಲ್ಲಿ ಈ ಸಮುದಾಯಗಳನ್ನೊಳಗೊಂಡಂತೆ ಎಲ್ಲಾ ಸಮುದಾಯದ ಬಡವರ ಜೀವನೋಪಾಯ ಮಟ್ಟವನ್ನು ಸುಧಾರಿಸುವಲ್ಲಿ MGNREGA ಯೋಜನೆ ಸಹಕಾರಿಯಾಗಿದೆ. ಅದರಲ್ಲೂ ಕೊವೀಡ್ ಸಂದರ್ಭದಲ್ಲಿ ಹೆಚ್ಚು ಸಹಕಾರಿಯಾಗಿದೆ. ಆದರೂ ಅರಣ್ಯ ಆಧಾರಿತ ಬುಡಕಟ್ಟು ಸಮುದಾಯಗಳಿಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಈ ಕಾಯಿದೆಯಡಿ ಅವಕಾಶ ಕಲ್ಪಿಸಬಹುದಾಗಿದೆ.
2. ಆದಾಯ ಮತ್ತು ಉದ್ಯೋಗದ ಲಭ್ಯತೆಯು ಹೆಚ್ಚಾಗಿ ಆರ್ಥಿಕತೆಯ ರಚನೆಯಿಂದ ಪ್ರಭಾವಿತವಾಗಿರುತ್ತದೆ. ವೈವಿಧ್ಯಮಯ ರಚನೆಯು ಬೆಳೆಯುತ್ತಿರುವ ಕಾರ್ಮಿಕ ಬಲಕ್ಕೆ ಪರ್ಯಾಯ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು MGNREGA ಸಹಕಾರಿಯಾಗಿದೆ.
3. ಕಾಫಿ ತೋಟದಲ್ಲಿ ದುಡಿಯುತ್ತಿರುವ ಬುಡಕಟ್ಟು ಜನರು ಸಂಕಷ್ಟದಲ್ಲಿ ಜೀವನ ದೂಡುತ್ತಿದ್ದು, ಇವರಿಗೆ MGNREGA ಕಾಯಿದೆಯಡಿ ಉದ್ಯೋಗ ನೀಡುವುದು ಅಗತ್ಯವಾಗಿದೆ.

**ಉಪಸಂಹಾರ**

ಕೊಡಗು ಜಿಲ್ಲೆಯ ಜನರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ MGNREGA ಕಾಯಿದೆ ಪರಿಣಾಮಕಾರಿಯಾಗಿದೆ. ಜಿಲ್ಲೆಯಲ್ಲಿ ವಿವಿಧ ಸಮುದಾಯಗಳು ವಾಸಿಸುತ್ತಿದ್ದು ಕೊಡವ ಸಮುದಾಯದವರು ಹೆಚ್ಚಿನ ಭೂ ಒಡೆತನವನ್ನು ಹೊಂದಿದ್ದಾರೆ ಹಾಗೂ ಕಾಫಿ ಚಹಾ ತೋಟದ ಮಾಲೀಕರಾಗಿದ್ದಾರೆ. ಪ್ರತಿಯಾಗಿ ಶೋಷಿತರು, ಬುಡಕಟ್ಟು ಜನರು ಹಾಗೂ ಹಿಂದುಳಿದ ಸಮುದಾಯದವರು ಕಷ್ಟದಲ್ಲಿ ಜೀವನ ದೂಡುತ್ತಿದ್ದಾರೆ. ಕೊವೀಡ್ ಸಂದರ್ಭದಲ್ಲಿ ಲಾಕ್‌ಡೌನ್ ಆದಾಗ ಉದ್ಯೋಗವಿಲ್ಲದೆ, ಆಹಾರವಿಲ್ಲದೆ ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿತ್ತು. ಈ ಸಂದರ್ಭದಲ್ಲಿ MGNREGA ಕಾಯಿದೆ ಉದ್ಯೋಗ ಸೃಷ್ಟಿಸುವುದರ ಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಸಹಾಯಕವಾಯಿತು ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡು ಕೊಳ್ಳಲಾಗಿದೆ. ಈ ಕಾಯಿದೆ ಗ್ರಾಮೀಣ ಜನರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಅತ್ಯಂತ ಪ್ರಮುಖವಾಗಿದ್ದು ಪರಿಣಾಮಕಾರಿ ಅನುಷ್ಠಾನಕ್ಕೆ ಗ್ರಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಸದಸ್ಯರ ಸಹಕಾರ ಅತ್ಯಂತ ಅಗತ್ಯವಾಗಿರುವುದನ್ನು ಕೂಡ ಅಧ್ಯಯನದಲ್ಲಿ ಗುರುತಿಸಲಾಗಿದೆ.

**ಪರಾಮರ್ಶನ ಗ್ರಂಥಗಳು**


- *ಕೊಡಗು ಜಿಲ್ಲೆಯ ಮಾನವ ಅಭಿವೃದ್ಧಿ ವರದಿ.* (2014). ಕರ್ನಾಟಕ ಸರ್ಕಾರ
- Baber, H., & Tripati, R. (2021). The price of the lockdown: The effects of social distancing on the Indian economy and business during the COVID-19 pandemic. *Ekonomski Horizonti*, *23*(1), 85–99. https://doi.org/10.5937/ekonhor2101085b
- Dar, K. H., Raina, S. H., & Ahmad, M. (2024). Evaluating the efficiency in MGNREGA during COVID-19 Pandemic: An interstate analysis using data envelopment analysis. *Indian Journal of Labour*

*Economics/Indian Journal of Labour Economics*. https://doi.org/10.1007/s41027-024-00485-6

- Kumar, S., & Madheswaran, S. (2022). MGNREGA in the Drought-Affected Talukas in Karnataka: Lessons for the COVID-19 induced calamity and reverse Migration. *Indian Journal of Human Development*, *16*(2), 305–316. https://doi.org/10.1177/09737030221124500
- Lokhande, N., & Gundimeda, H. (2021). MGNREGA: the guaranteed refuge for returning migrants during COVID-19 lockdown in India. *Indian Economic Journal/the Indian Economic Journal*, *69*(3), 584–590. https://doi.org/10.1177/00194662211023848
- Vasudevan, G., Singh, S., Gupta, G., & Jalajakshi, C. K. (2020). MGNREGA in the Times of COVID-19 and Beyond: Can India do More with Less? *Indian Journal of Labour Economics/Indian Journal of Labour Economics*, *63*(3), 799–814. https://doi.org/10.1007/s41027-020-00247-0